ಅ) 1. ಸರ್ಕಾರಿ ಆದಶ ಸಂಖ್ಯೆ : ಎಫ್‌ಡಿ 36 ಎಸ್‌ಆರ್‌ಡಿ 85 ದಿ. 27-7-85ರಲ್ಲಿ ತಿಂಗಳಿಗೆ ಕನಿಷ್ಟ ರೂ. 50-00 ಗರಿಷ್ಟ ರೂ. 240-00ಕ್ಕೆ ದಿ.1-8-85 ರಿಂದ ಮೂಲ ವೇತನದ ಶೇಕಡಾ 7.5 ರಷ್ಟು.

2. ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 54 ಎಸ್‌ಆರ್‌ಡಿ 86, ದಿ.18-6-86ರಲ್ಲಿ ತಿಂಗಳಿಗೆ ಕನಿಷ್ಟ ರೂ. 35-00 ಗರಿಷ್ಟ ರೂ. 85-00 ರಂತೆ ದಿ. 1-6-86 ರಿಂದ ಮೂಲ ವೇತನದ ಶೇಕಡಾ 3ರಷ್ಟು

3. ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 36 ಎಸ್‌ಆರ್‌ಡಿ 32 ದಿ.16-10-92 ರಲ್ಲಿ ತಿಂಗಳಿಗೆ ಕನಿಷ್ಟ ರೂ. 60-00 ಮತ್ತು ಗರಿಷ್ಟ ರೂ. 200-00 ದಿ. 1-6-92 ರಿಂದ ಮೂಲ ವೇತನದ ಶೇಕಡಾ 5ರಷ್ಟು.

ಇ) ರಾಜ್ಯ 3ನೇ ವೇತನ ಆಯೋಗ ಹಾಗೂ ರಾಜ್ಯ 4ನೆ ವೇತನ ಆಯೋಗಗಳು ದಿ.1-1-82 ರಿಂದ ದಿನಾಂಕ 36-6-93ರ ಅವಧಿಯಲ್ಲಿ ನಿವೃತ್ತರಾದ ಸರ್ಕಾರಿ ನೌಕರರಿಗೆ ಯಾವುದೇ ಪರಿಹಾರವನ್ನು ಶಿಫಾರಸ್ಸು ಮಾಡಿರುವುದಿಲ್ಲ. ಆದಾಗ್ಯೂ ರಾಜ್ಯ ಸರ್ಕಾರವು ದಿ. 19-7-85ಕ್ಕಿಂತ ಮೊದಲು ನಿವೃತ್ತರಾದ ಸರ್ಕಾರಿ ನೌಕರರಿಗೆ ಪಿಂಚಣಿ : ಕುಟುಂಬ ಪಿಂಚಣಿಯಲ್ಲಿ ಪರಿಹಾರ : ಪಿಂಚಣಿಯಲ್ಲಿ ಹೆಚ್ಚಳವನ್ನು ದಿ.1-7-87ರಿಂದ ಜಾರಿಗೆ ಬರುವಂತೆ ಗರಿಷ್ಟ ರೂ. 100-00ಕ್ಕೆ ಒಳಪಟ್ಟಂತೆ ರೂ. 675-00ಕ್ಕಿಂತ ಕಡಿಮೆ ಪಿಂಚಣಿ ಪಡೆಯುತ್ತಿರುವವರಿಗೆ ಮೂಲ ಪಿಂಚಣಿಯ ಶೇಕಡಾ 5ರಷ್ಟು ಹಾಗೂ ರೂ. 675-00ಕ್ಕೂ ಹೆಚ್ಚು ಪಿಂಚಣಿ ಪಡೆಯುತ್ತಿರುವವರಿಗೆ ಮೂಲ ಪಿಂಚಣಿಯ ಶೇಕಡಾ $7^1/_2$ರಷ್ಟನ್ನು ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 20 ಎಸ್‌ಆರ್‌ಎಸ್ 87 (ii) ದಿ. 17-8-87ರಲ್ಲಿ ಮಂಜೂರು ಮಾಡಿದೆ. ಮುಂದುವರಿದು ರಾಜ್ಯ ಸರ್ಕಾರವು ಇತ್ತೀಚೆಗೆ ಪಿಂಚಣಿದಾರರಿಗೆ : ಕುಟುಂಬ ಪಿಂಚಣಿದಾರರಿಗೆ ಮೂಲ ಪಿಂಚಣಿಯ ಶೇಕಡಾ 20ರಷ್ಟು ತಾತ್ಕಾಲಿಕ ಪರಿಹಾರವನ್ನು ದಿ. 1-12-97ರಿಂದ ಜಾರಿಗೆ ಬರುವಂತೆ ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ (ವಿಶೇಷ) 01 ಪಿಇಟಿ 98, ದಿ. 9-1-98ರಲ್ಲಿ ಮಂಜೂರು ಮಾಡಿದೆ.

ಹಿರೇಕೆರೂರು ತಾಲ್ಲೂಕಿನಲ್ಲಿ ಪಶು ಸಂಗೋಪನಾ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು

1741 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು?

ಆ) ಈ ಹುದ್ದೆಗಳನ್ನು ತುಂಬಲು ಸರ್ಕಾರವು ಯಾವ ಕ್ರಮ ಕೈಗೊಳ್ಳಲಾಗಿದೆ?

ಇ) *ಹಿರೇಕೆರೂರು ತಾಲ್ಲೂಕಿನಲ್ಲಿರುವ ಪಶು ಚಿಕಿತ್ಸಾಲಯ, ಪಶು ಆಸ್ಪತ್ರೆ, ಗ್ರಾಮೀಣ ಪಶುಚಿಕಿತ್ಸಾ ಕೇಂದ್ರಗಳು ಎಷ್ಟು, ಅವು ಯಾವುವು?*

ಈ) *ಈ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?*

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 3,486

ಆ) ಮುಂಬಡ್ತಿ, ನೇರ ನೇಮಕಾತಿ, ಅನುಕಂಪದ ಆಧಾರದ ಮೇಲೆ ತುಂಬಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಇ) 1. ಪಶು ಆಸ್ಪತ್ರೆ 02

2. ಪಶು ಚಿಕಿತ್ಸಾಲಯ 06

3. ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ 12

4. ಸಂಚಾರಿ ಪಶುಚಿಕಿತ್ಸಾಲಯ 01

5. ಕೃತಕ ಗರ್ಭಧಾರಣಾ ಕೇಂದ್ರ 09

(ವಿವರಗಳನ್ನು ಅನುಬಂದ - 1ರಲ್ಲಿ ನೀಡಲಾಗಿದೆ.)

ಈ) 16.

ಸಾಹಿತಿ ಕಲಾವಿದರಿಗೆ ಮಾಶಾಸನ

1742 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1996-97ನೇ ಸಾಲಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಹಿತಿ ಕಲಾವಿದರಿಗೆ ಮಾಸಾಶನ ಮಂಜೂರು ಮಾಡಲಾಗಿದೆಯೇ? (ಅವರ ಹೆಸರುಗಳನ್ನು ತಿಳಿಸುವುದು)*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವೆಯರು.

ಅ) ಹೌದು. ಹೆಸರುಗಳ ಪಟ್ಟಿ ಅನುಬಂಧ-1ರಲ್ಲಿ ನೀಡಲಾಗಿದೆ.